**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 940 /2019**

**CW- 1** **PW: 1**

ಸಾಕ್ಷಿಯ ಹೆಸರು : ಚನ್ನಬಸಯ್ಯ ಶಿವಪ್ಪಯ್ಯನಮಠ
ತಂದೆ /ಗಂಡನ ಹೆಸರು : ಉಮೇಶ
ವಯಸ್ಸು : 29 ವರ್ಷ
ಉದ್ಯೋಗ : ಖಾಸಗಿ ಕೆಲಸ
ವಾಸಸ್ಥಳ : ಬದಾಮಿ.

**ದಿಃ 28.05.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ದಿಃ 07-01-2019 ರಂದು ಬೆಳಿಗ್ಗೆ ನಾನು ಕೆಲಸಕ್ಕೆ ಹೋಗಿ ಸಂಜೆ ಈಶ್ವರ ನಗರ ಎ ಪಿ ಎಂ ಸಿ ಯಲ್ಲಿರುವ ನಮ್ಮ ಅತ್ತೆಯ ಮನೆ ಹತ್ತಿರ ನನ್ನ ದ್ವಿಚಕ್ರ ವಾಹನ ಸಂಖ್ಯೆ ಕೆಎ 25 ಎಚ್ ಬಿ 1495 ಇದನ್ನು ನಿಲುಗಡೆ ಮಾಡಿ ಮಲಗಿಕೊಂಡಿದ್ದೆನು ಬೆಳಿಗ್ಗೆ ಸುಮಾರು 5 ಗಂಟೆಗೆ ನನ್ನ ಮಾವ ಗುರುಶಾಂತಯ್ಯ ವಾಯುವಿಹಾರಕ್ಕೆ ಹೋಗಲು ಮನೆಯ ಹೊರಗೆ ಬಂದು ನೋಡಿದಾಗ ಸದರಿ ದ್ವಿಚಕ್ರ ವಾಹನ ಸ್ಥಳದಲ್ಲಿ ಇರಲಿಲ್ಲ. 4-5 ದಿನಗಳ ವರಗೆ ಎಲ್ಲ ಕಡೆ ಹುಡುಕಿ ನೋಡಿದರೂ ಸದರಿ ವಾಹನ ಸಿಗಲಿಲ್ಲ ಆಗ ನವನಗರ ಠಾಣೆಯಲ್ಲಿ ಹೋಗಿ ದಿಃ 16-01-2019 ರಂದು ಪಿರ್ಯಾದಿ ಸಲ್ಲಿರುಸಿತ್ತೇನೆ. ಪಿರ್ಯಾದಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ದಿಃ 17-01-2019 ರಂದು ಪೋಲಿಸರು ನಮ್ಮ ಅತ್ತೆಯ ಮನೆಯ ಮುಂದೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಸುಮಾರು 8-10 ದಿನಗಳ ನಂತರ ಪೋಲಿಸರು ನನ್ನ ದ್ವಿ ಚಕ್ರ ವಾಹನ ಸಿಕ್ಕಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಠಾಣೆಗೆ ಹೋದಾಗ ಪೋಲಿಸರು ನನಗೆ ಒಬ್ಬ ಪ್ರೇಮ ಬದ್ದಿಹಾಗೂ ಮತ್ತೊಬ್ಬ ಪವನ ಮೆಹರವಾಡೆ ಎಂಬ ವ್ಯಕ್ತಿಗಳನ್ನು ತೋರಿಸಿ ಅವರೇ ನನ್ನ ವಾಹನವನ್ನು ಕಳ್ಳತನ ಮಾಡಿರುತ್ತಾರೆಂದು ಹೇಳಿರುತ್ತಾರೆ. ದಿಃ 11-02-2019 ರಂದು ಸದರಿ ವಾಹನವನ್ನು ನನ್ನ ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸುಪರ್ದಿಗೆ ಪಡೆದುಕೊಂಡಿರುತ್ತೇನೆ. ಆ ದಿನ ಠಾಣೆಯಲ್ಲಿ ತೋರಿಸಿದ ಸದರಿ ವ್ಯಕ್ತಿಗಳನ್ನು ನಾನು ನೋಡಿದರೆ ಗುರುತಿಸಿತ್ತೇನೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ ಹೆಸರು ಪವನ ಮೆಹರವಾಡೆ ಆಗಿರುತ್ತದೆ ಹಾಗೂ ವಿಸಿ ಮುಖಾಂತರ ನೋಡುತ್ತಿದ್ದ ಆರೋಪಿಯ ಹೆಸರು ಪ್ರೇಮ ಬದ್ದಿ ಆಗಿರುತ್ತದೆ. ನಾನು ನನ್ನ ಕಳೆದು ಹೋದ ವಾಹನ

ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ 2 ರಿಂದ 5 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ 1 ನೇ ಆರೊಪಿಯನ್ನು ವಿಸಿ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಿದ್ದು ಅವರ ಪರ ವಕೀಲರುವು ಗೈರು ಹಾಜರಿದ್ದು ಆರೋಪಿ 1 ರ ಪರ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲುಃ 2 ನೇ ಆರೊಪಿ ಪರ ಶ್ರೀ ಬಿ ಎಸ್ ಎ ವಕೀಲರಿಂದ ಃ**

ಆ ದಿನ ಪೋಲಿಸರು ಘಟನಾ ಸ್ಥಳಕ್ಕೆ ಫೋಟೋ ತೆಗೆದಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ಏನು ಬರೆದಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುತ್ತದೆ. ಪೋಲಿಸರ ಕೋರಿಕೆಯ ಮೇರೆಗೆ ನಾನು ಪಿರ್ಯಾದಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ ಅಲ್ಲಿ ಯಾವುದೇ ಆರೋಪಿತರು ಇರಲಿಲ್ಲ ಆದರೂ ಪೋಲಿಸರು ಆರೋಪಿತರನ್ನು ತೋರಿಸಿ ಇವರೇ ನನ್ನ ವಾಹನವನ್ನು ಕಳ್ಳತನ ಮಾಡಿರುತ್ತಾರೆಂದು ಹೇಳಿರುತ್ತಾರೆಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಪ್ರಕಾರ ಆ ದಿನ ಯಾವುದೇ ಘಟನೆ ಆಗಿಲ್ಲ ಹಾಗೂ ಕಳ್ಳತನ ಸಹ ಆಗಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೂ ಆರೋೆಪಿತರಿಗೂ ಹಾಗೂ ಜಪ್ತು ಪಡಿಸಿದ ವಾಹನಕ್ಕೆ ಯಾವುದೇ ಸಂಬಂದ ಇಲ್ಲದಿದ್ದರೂ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**